ತಡೆ ಹಿಡಿಯಲಾದ ಪ್ರಶ್ನೋತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಣೆಯವರೇ, ಸದರಿ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ. ಈ ವಿಷಯದ ಬಗ್ಗೆ ಹೇಳಿಕೆಯನ್ನು ಇವೊತ್ತು ಮಧ್ಯಾಹ್ನ ಅಥವಾ ನಾಳೆ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುವುದಕ್ಕಿಂತ ಮುಂಚಿತವಾಗಿ ನಾವು ಪ್ರಶ್ನೆ ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷಣೆಯವರು : ಆಯಿತು. ಆಗ ಒಂದೆರಡು ನಿಮಿಷ ಮಾತನಾಡುವುದಕ್ಕೆ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಉಪಾಧ್ಯಕ್ಷಣೆಯವರು : ಮಾನ್ಯ ಯು.ಕೆ. ಶಾಮಣ್ಣನವರೇ, ನಿಮ್ಮ ಪ್ರಶ್ನೆಯನ್ನು ವಿತ್ ಹೆಲ್ಡ್ ಮಾಡುತ್ತೇನೆ. ಏಕೆಂದರೆ, ಸದನದಲ್ಲಿ ಉತ್ತರ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಇಲ್ಲದಿರುವುದರಿಂದ ಇದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ, ದಿನಾಂಕ 7.1.93ರ ಲಿಖಿತ ಮೂಲಕ ಉತ್ತರಿಸುವ 9ನೇ ಪಟ್ಟಿಯಲ್ಲಿರುವ 71 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 49, 87, 849, 938, 998, 398, 621, 505, 506, 619, 633, 1036, 1043, 737, 1061, 1067 ಮತ್ತು 1070 ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನುಳಿದ 54 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ಜಿಲ್ಲೆಯ ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ವೃದ್ಧಾಪ್ಯವೇತನ ಪಡೆದವರ ಸಂಖ್ಯೆ

95 - ಶ್ರೀ ಸಿದ್ದಯ್ಯ ಕೆ. (ಸಂತೇಮಾರನ ಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ವೃದ್ಧಾಪ್ಯವೇತನ ಮಂಜೂರು ಮಾಡಲಾದ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ತಿಳಿಸಿ (ಪಟ್ಟಿ ಒದಗಿಸುವುದು).

ಆ) ಸರ್ಕಾರಿ ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕುಟುಂಬದಲ್ಲಿರುವವರಿಗೆ ಹಾಗೂ ಆನುಕೂಲಸ್ಥರಿಗೆ ವೃದ್ಧಾಪ್ಯ ವೇತವನ್ನು ನೀಡುತ್ತಿದ್ದು, ಆದರೆ ಬಡವರು ಹಾಗೂ ಅರ್ಹರಾದವರಿಗೆ ವೃದ್ಧಾಪ್ಯ ವೇತನವನ್ನು ನಿಲ್ಲಿಸಿರುವ ವಿಚಾರವು ಸಂಬಂಧಪಟ್ಟ ತಹಶೀಲ್ದಾರರಿಗೆ ಹಾಗೂ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಡವರು ಹಾಗೂ ಅರ್ಹರಿಗೆ ನ್ಯಾಯ ಒದಗಿಸಲು ಈ ವಿಷಯವನ್ನು ಸಂಬಂಧಪಟ್ಟ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದೆ ಪರಿಷ್ಕರಣೆಗಾಗಿ ಇಡಲು

ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರಿಗೆ ಸೂಚನೆಗಳನ್ನು ನೀಡಲು ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 1992ನೇ ನವೆಂಬರ್ ತಿಂಗಳಿಗೆ ಆಂಥ್ಯವಾದಂತೆ ಚಾಮರಾಜನಗರ ತಾಲ್ಲೂಕಿನಲ್ಲಿ 12769 ಪ್ರಕರಣಗಳಲ್ಲಿ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ 7155 ಫಲಾನುಭವಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಲಾಗಿದೆ. ಫಲಾನುಭವಿಗಳ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಅನರ್ಹ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಿರುವ ಪ್ರಕರಣಗಳನ್ನು ಸಂಬಂಧ ಪಟ್ಟ ತಹಶೀಲ್ದಾರರು ಪತ್ತೆ ಮಾಡಿ ಅಂತಹವುಗಳನ್ನುರದ್ದುಪಡಿಸುವರು. ಈ ಸಂಬಂಧವಾಗಿ ಬಂದು ಅರ್ಜಿಗಳನ್ನು ಪರಿಶೀಲಿಸಲು ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗುವುದು.

ಇ) ಅರ್ಹ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನವನ್ನು ವಿನಾಕಾರಣ ರದ್ದುಪಡಿಸಿರುವ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಸಹಾಯಕ ಆಯುಕ್ತರಿಂದ ತನಿಖೆಯನ್ನು ನಡೆಸಿ ಅರ್ಹರೆಂದು ಕಂಡುಬಂದಲ್ಲಿ ಅವರಿಗೆ ವೃದ್ಧಾಪ್ಯ ವೇತನವನ್ನು ಪುನಃ ನೀಡಲು ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧವಾಗಿ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದರ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದರ ವರದಿಯನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದೆ ಇಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ, ಈ ಪದ್ಧತಿಯನ್ನು ಅನುಸರಿಸುವುದು ಸೂಕ್ತವಾಗಿರಲಾರದು.

ಶಿಕಾರಿಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಒಡೆದ ಕೆರೆಗಳ ಹಾಗೂ ಅದರ ಪರಿಣಾಮ.

233 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ನವೆಂಬರ್ 17,18 ರಂದು ಭಾರಿ ಮಳೆಯಿಂದ ಒಡೆದು ಹೋದ ಕೆರೆಗಳೆಷ್ಟು?

ಆ) ಹಾಗಿದ್ದಲ್ಲಿ, ಕೊಚ್ಚಿಕೊಂಡು ಹೋಗಿರುವ ಪ್ರಮುಖ ರಸ್ತೆಗಳ ಸೇತುವೆಗಳ ಸಂಖ್ಯೆ ಎಷ್ಟು?

ಇ) ಈ ಬಗ್ಗೆ ಸರ್ಕಾರದ ಈವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಪರಿಹಾರ ಕಾರ್ಯಗಳಾವುವು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) 105 ಸಣ್ಣ ನೀರಾವರಿ ಕೆರೆಗಳು ಒಡೆದು ಹೋಗಿರುತ್ತದೆ.

ಆ) ರಸ್ತೆಗಳು 65 (ಸಂಖ್ಯೆ) ಅತ್ಯಧಿಕ

ಸೇತುವೆಗಳು 9 (ಸಂಖ್ಯೆ) ಮಳೆಯಿಂದ ಹಾನಿಗೊಂಡಿದೆ.

ಅಡಿಗಾಲುವೆ.